ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:ಶ್ರೀಮತಿ ಹೇಮಲತ ನಾಯಕ್ (ವಿಧಾನ ಸಭಾ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:**213**
ಉತ್ತರಿಸಬೇಕಾದ ದಿನಾಂಕ	:28.01.2026
ಉತ್ತರಿಸಬೇಕಾದ ಸಚಿವರು	:ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ 10 ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಲಾಗಿರುವ ವಸತಿ ವಿನ್ಯಾಸಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ಒದಗಿಸುವುದು)	ಕಳೆದ 10 ವರ್ಷಗಳಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಕೊಪ್ಪಳ ಜಿಲ್ಲೆ ಡಿ.ಸಿ ಆಫೀಸ್ ಹಿಂಭಾಗ ಒಟ್ಟು 46 ಎಕರೆ 29 ಗುಂಟೆ ಜಮೀನಿನಲ್ಲಿ ವಸತಿ ಯೋಜನೆಯನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.
ಆ)	ಜಿಲ್ಲೆಯಲ್ಲಿ ಮಂಡಳಿಯಿಂದ ಅಭಿವೃದ್ಧಿ ಮಾಡಿರುವ ವಸತಿ ಲೇಔಟ್‌ಗಳಲ್ಲಿನ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ, ಹಂಚಿಕೆ ಮಾಡಲು ಬಾಕಿ ಇರುವ ನಿವೇಶನಗಳೆಷ್ಟು, ಬಾಕಿ ಉಳಿದಿರಲು ಕಾರಣವೇನು ; (ವಿವರ ನೀಡುವುದು)	ಕೊಪ್ಪಳ ಡಿ.ಸಿ ಆಫೀಸ್ ಹಿಂಭಾಗದ ಬಡಾವಣೆಯಲ್ಲಿ ವಿವಿಧ ವರ್ಗದ 462 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. 174 ನಿವೇಶನಗಳು ಹಂಚಿಕೆಗೆ ಬಾಕಿ ಇರುತ್ತದೆ. ಹಂಚಿಕೆಯಾಗಿ ರದ್ದತಿಯಾಗಿರುವ ಸ್ವತ್ತುಗಳು, ಮೂಲೆ ನಿವೇಶನಗಳು ಮತ್ತು ವಾಣಿಜ್ಯ ನಿವೇಶನಗಳನ್ನು ನಿಯಮಾನುಸಾರ ಹರಾಜು ಮೂಲಕ ವಿಲೇವಾರಿ ಮಾಡಬೇಕಾಗಿರುವ ಪ್ರಯುಕ್ತ ಹಂತ ಹಂತವಾಗಿ ಕ್ರಮವಹಿಸಲಾಗುತ್ತಿದೆ.
ಇ)	ಈಗಾಗಲೇ ಹಂಚಿಕೆ ಮಾಡಿರುವ ಲೇಔಟ್‌ಗಳಲ್ಲಿನ ಎಲ್ಲಾ ಸಾರ್ವಜನಿಕ ಮೂಲ ಸೌಕರ್ಯಗಳನ್ನು ರಸ್ತೆ, ಪಾರ್ಕ್, ಸಿ.ಎ ಸೈಟ್ ಹಾಗೂ ಇತ್ಯಾದಿ ಆಯಾ ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆಯೇ ; ಇಲ್ಲದಿದ್ದಲ್ಲಿ ಬಾಕಿ ಇರಲು ಕಾರಣವೇನು ;	2015-16 ನೇ ಸಾಲಿನಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಕೊಪ್ಪಳ ಜಿಲ್ಲೆ ಡಿ.ಸಿ ಆಫೀಸ್ ಹಿಂಭಾಗ ಒಟ್ಟು 46 ಎಕರೆ 29 ಗುಂಟೆ ಜಮೀನಿನಲ್ಲಿ ವಸತಿ ಯೋಜನೆಯನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಸದರಿ ಬಡಾವಣೆಯ ವಿದ್ಯುತ್ ಚಾರ್ಜಿಂಗ್ ನಂತರ ನಗರ ಸಭೆಗೆ ಹಸ್ತಾಂತರಿಸಲು ಕ್ರಮವಹಿಸಲಾಗುತ್ತಿದೆ.
ಈ)	ಈಗಾಗಲೇ ಹಂಚಿಕೆ ಮಾಡಿರುವ ನಿವೇಶನಗಳ ಭೂಮಾಲೀಕರುಗಳಿಗೆ ಆಯಾ ನಗರ ಸ್ಥಳೀಯ ಸಂಸ್ಥೆಗಳಿಂದ ನಮೂದನೆ-3 ನೀಡಲಾಗುತ್ತಿದೆಯೇ ; ಇಲ್ಲವಾದಲ್ಲಿ ಅದಕ್ಕೆ ಕಾರಣವೇನು ;	ಸದರಿ ಬಡಾವಣೆಯನ್ನು ನಗರಸಭೆಗೆ ಹಸ್ತಾಂತರಿಸಲು ಕ್ರಮವಹಿಸಲಾಗಿದ್ದು, ಹಸ್ತಾಂತರವಾಗದ ಕಾರಣ, ನಿವೇಶನಗಳ ಮಾಲೀಕರುಗಳಿಗೆ ನಗರ ಸಭೆಯಿಂದ ನಮೂನೆ 3 ಅನ್ನು ನೀಡಲಾಗುತ್ತಿಲ್ಲ.
ಉ)	ಕೆ.ಎಚ್.ಬಿ ಯು ಲೇಔಟ್‌ಗಳಲ್ಲಿನ ಎಲ್ಲಾ ಸಾರ್ವಜನಿಕ ಮೂಲ ಸೌಕರ್ಯಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಬಾಕಿ ಇರುವ ಪ್ರಕರಣಗಳನ್ನು ಯಾವ ಅವಧಿಯೊಳಗಾಗಿ ಹಸ್ತಾಂತರಿಸಲಾಗುವುದು ?	ಸದರಿ ಬಡಾವಣೆಯನ್ನು ಮುಂದಿನ ನಿರ್ವಹಣೆಗಾಗಿ ಹಸ್ತಾಂತರಿಸಿಕೊಳ್ಳಲು ನಗರಸಭೆಗೆ ಈಗಾಗಲೇ ಕೋರಲಾಗಿರುತ್ತದೆ.

ಸಂಖ್ಯೆ :ವಇ 15 ಕೆಹೆಚ್‌ಬಿ 2026

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು